**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**

ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

**कर्नाटक-संस्कृत-विश्वविद्यालयः**

श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु - ५६००१८.

ಕಸಂವಿ/01/ರಾ.ಸ್ಪ/2021-22

ದಿನಾಂಕ 26-02-22

## ಸುತ್ತೋಲೆ

ಮಾನ್ಯ ಪ್ರಾಚಾರ್ಯರೇ,

ವಿಷಯ : 2022ನೇ ಮಾರ್ಚ್ ತಿಂಗಳಿನಲ್ಲಿ ನಡೆಯಲಿರುವ ರಾಜ್ಯಸ್ತರೀಯ ಸಂಸ್ಕೃತ ಸ್ಪರ್ಧೆಗಳ ಬಗ್ಗೆ

ರಾಷ್ಟ್ರಿಯ ಸಂಸ್ಕೃತ ಸಂಸ್ಥಾನವು ನಡೆಸುವ ಅಖಿಲ ಭಾರತೀಯ ಶಾಸ್ತ್ರೀಯ ಸ್ಪರ್ಧೆಗೆ ಕರ್ನಾಟಕ ರಾಜ್ಯದಿಂದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸುವ ಉದ್ದೇಶದಿಂದ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು ಈ ಬಾರಿಯ ರಾಜ್ಯಸ್ತರೀಯ ಸ್ಪರ್ಧೆಗಳನ್ನು **ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಪಂಪಮಹಾಕವಿ ರಸ್ತೆ, ಬೆಂಗಳೂರು – 18 ಇಲ್ಲಿ ದಿನಾಂಕ 17 ಹಾಗೂ 18-03-2022 ನೇ ಗುರುವಾರ ಹಾಗೂ ಶುಕ್ರವಾರಗಳಂದು** ನಡೆಸುವುದಾಗಿ ತೀರ್ಮಾನಿಸಿದೆ.

ಈ ಹಿನ್ನೆಲೆಯಲ್ಲಿ ತಾವು ತಮ್ಮ ಕಾಲೇಜು ಮಟ್ಟದ ಸ್ಪರ್ಧೆಯನ್ನು ನಡೆಸಿ ದಿನಾಂಕ 10-03-2022ನೇ ಗುರುವಾರದ ಒಳಗಾಗಿ ವಿದ್ಯಾರ್ಥಿಗಳ ಪಟ್ಟಿಯನ್ನು ಹಾಗೂ ಮಾರ್ಗದರ್ಶಕರ ಹೆಸರನ್ನು ನಿಗದಿತ ಮಾದರಿಯಲ್ಲಿ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡಲು ಸೂಚಿಸಲಾಗಿದೆ. ತಡವಾಗಿ ಬರುವ ವಿದ್ಯಾರ್ಥಿಗಳ ಪಟ್ಟಿಯನ್ನು ಸ್ಪರ್ಧೆಗೆ ಪರಿಗಣಿಸಲಾಗುವುದಿಲ್ಲ.

ಸೂಚನಾ ಪತ್ರವನ್ನು ಲಗತ್ತಿಸಲಾಗಿದೆ.

ಕುಲಸಚಿವರು

Registrar
Karnataka Samskrit University
Pampa Mahakavi Road, Chamarajpet,
Bengaluru - 560018. Ph: 080-26705387

ಪ್ರತಿಗಳು :

1. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಂಬಂಧಪಟ್ಟ ಕಾಲೇಜುಗಳು
2. ಪ್ರಾಂಶುಪಾಲರು, ರಾ.ಸಂ.ಸಂ ರಾಜೀವ ಗಾಂಧಿ ಪರಿಸರ ಶೃಂಗೇರಿ
3. ಗುರುಕುಲಗಳು
4. ಸಂಶೋಧನ ಮಂದಿರಗಳು
5. ಕುಲಪತಿಗಳ ಆಪ್ತಶಾಖೆ
6. ಕುಲಸಚಿವರ ಆಪ್ತಶಾಖೆ
7. ಅಂತರ್ಜಾಲ ಪುಟ
8. ಕಛೇರಿ ಪ್ರತಿ

**ಹೆಚ್ಚಿನ ಮಾಹಿತಿಗಾಗಿ :**

ಡಾ.ರಾಮಕೃಷ್ಣ ಭಟ್ ಕೆ ಸಹಾಯಕ ಪ್ರಾಧ್ಯಾಪಕರು , ಸಂಯೋಜಕರು ರಾ.ಸ್ಪ – ಕ ಸಂ ವಿ – 9844741855

ಕಸಂವಿ/01/ರಾ.ಸ್ಪ/2021-22

ದಿನಾಂಕ 26-02-22

## ಸೂಚನಾ ಪತ್ರ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021-22 ನೇ ಸಾಲಿನಲ್ಲಿ ನಡೆಸುವ ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳಿಗೆ ಸಂಬಂಧಿಸಿದ ಅಗತ್ಯ ಸೂಚನೆಗಳನ್ನು ಈ ಮೂಲಕ ನೀಡಲಾಗಿದೆ.

ಸೂಚನೆಗಳು :

- ರಾಜ್ಯಸ್ತರದ ಸ್ಪರ್ಧೆಯ ನಿಯಮಗಳಿಗಾಗಿ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಜಾಲತಾಣವನ್ನು (http://ksu.ac.in) ಹಾಗೂ ರಾಷ್ಟ್ರಸ್ತರದ ಸ್ಪರ್ಧೆಯ ನಿಯಮಗಳಿಗಾಗಿ ರಾಷ್ಟ್ರಿಯ ಸಂಸ್ಕೃತ ಸಂಸ್ಥಾನದ ಜಾಲತಾಣವನ್ನು (http://www.sanskrit.nic.in/) ನೋಡುವುದು.
- ವಿದ್ಯಾರ್ಥಿಗಳಿಗೆ ಹಾಗೂ ಮಾರ್ಗದರ್ಶಕರಿಗೆ ಭೋಜನ ಹಾಗೂ ಸಾಮಾನ್ಯ ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗುವುದು. ಹಾಸಲು ಹೊದೆಯಲು ಬೇಕಾಗುವ ಬಟ್ಟೆಗಳನ್ನು ತಂದುಕೊಳ್ಳುವುದು.
- ಪ್ರತಿ ವಿದ್ಯಾಲಯದ ಒಬ್ಬ ಮಾರ್ಗದರ್ಶಕರಿಗೆ ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಮಾತ್ರ ಕರ್ನಾಟಕ ಸಾರಿಗೆ ಸಾಮಾನ್ಯ ಬಸ್ಸಿನ ದರವನ್ನು ಮಾರ್ಗವ್ಯಯದ ರೂಪದಲ್ಲಿ ನೀಡಲಾಗುವುದು.
- ನಿರ್ಣಾಯಕರ ತೀರ್ಮಾನವೇ ಅಂತಿಮವಾಗಿರುತ್ತದೆ. ನಿರ್ಣಾಯಕರ ನಿರ್ಣಯವನ್ನು ಪ್ರಶ್ನಿಸುವುದಕ್ಕೆ ಅವಕಾಶವಿರುವುದಿಲ್ಲ.
- ವಿದ್ಯಾರ್ಥಿಗಳ ಹೆಸರನ್ನು ನಿಗದಿತ ಮಾದರಿಯಲ್ಲಿಯೇ (ಮಾದರಿ ಪತ್ರವನ್ನು ಕಸಂವಿ ಜಾಲತಾಣದಲ್ಲಿ (Website) ನೀಡಲಾಗಿದೆ) ತುಂಬಿ ಪ್ರಾಂಶುಪಾಲರು ದೃಢೀಕರಿಸಿ ಅಂಚೆ ಮೂಲಕ ಕಳುಹಿಸಬೇಕು ಅಥವಾ ಸ್ಕ್ಯಾನ್ ಮಾಡಿ ramakrishnabhat@ksu.ac.in Email ID ಗೆ ಮೈಲ್ ಮೂಲಕ ಕಳುಹಿಸಬಹುದು.
- ವಿದ್ಯಾರ್ಥಿಗಳ ಪಟ್ಟಿಯನ್ನು ಕಳುಹಿಸಿದ ಕೂಡಲೇ ಕಸಂವಿ ಸಂಯೋಜಕರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿ ನೀಡಬೇಕು.
- ಒಂದುಬಾರಿ ಕಳುಹಿಸಿದ ಹೆಸರಿನ ಪಟ್ಟಿಯನ್ನು ಬದಲಾಯಿಸಲು ಅಥವಾ ಬದಲಾಗಿ ಬೇರೆ ವಿದ್ಯಾರ್ಥಿಗಳಿಗೆ ಭಾಗವಹಿಸಲು ಅವಕಾಶವಿರುವುದಿಲ್ಲ.
- ದಿನಾಂಕ 17-02-22ರಂದು ಬೆಳಗ್ಗೆ 8.30ರಿಂದ ನಡೆಯುವ ಭಾಷಣ ಸ್ಪರ್ಧೆಗಳಿಗೆ ಬೆಳಗ್ಗೆ 7 ಗಂಟೆಗೆ ವಿಷಯ ನೀಡಲಾಗುವುದು.
- ಸ್ಪರ್ಧೆಯ ಸಮಯಸಾರಿಣಿಯನ್ನು ಕ.ಸಂವಿ ಜಾಲತಾಣದಲ್ಲಿ (Website) ಪ್ರಕಟಿಸಲಾಗುವುದು.
- ಸ್ಪರ್ಧೆಯ ವಿಷಯವನ್ನು ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಕಛೇರಿಯ ಮುಂದೆ ಇರುವ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುವುದು.
- ಮುಂದಿನ ಎಲ್ಲಾ ಸೂಚನೆಗಳನ್ನು ಕಸಂವಿ ಜಾಲತಾಣದಲ್ಲಿ (Website) ನೀಡಲಾಗುವುದು. ಯಾವುದೇ ಮಾಹಿತಿಯನ್ನು ಪತ್ರ ಮೂಲಕ ಕಳುಹಿಸಲಾಗುವುದಿಲ್ಲ.

ಕುಲಸಚಿವರು

Registrar
Karnataka Samskrit University
Pampa Mahakavi Road, Chamarajpet,
Bengaluru - 560018. Ph: 080-26705387

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

कर्नाटक–संस्कृत–विश्वविद्यालय:
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

ಕಸಂವಿ/01/ರಾ.ಸ್ಪ/2021–22

ದಿನಾಂಕ 26–02–22

## ರಾಜ್ಯಸ್ತರೀಯ ಶಾಸ್ತ್ರೀಯ ಸ್ಪರ್ಧೆಗಳ ನಿಯಮಗಳು

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2021–22ನೇ ಸಾಲಿನಲ್ಲಿ ನಡೆಸಲಿರುವ ರಾಜ್ಯಸ್ತರೀಯ ಸ್ಪರ್ಧೆಗಳ ನಿಯಮಾವಳಿಗಳನ್ನು ಈ ಮೂಲಕ ನೀಡಲಾಗಿದೆ.

**ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು .**

1) ಯಾವುದೇ ಸಂಸ್ಕೃತ ವಿದ್ಯಾಲಯದಲ್ಲಿ ಶಾಸ್ತ್ರಿ 3 ನೇ ವರ್ಷ ಅಥವಾ ಆಚಾರ್ಯ ತರಗತಿಯಲ್ಲಿ ಓದುತ್ತಿರಬೇಕು.
2) ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಒಂದು ಸ್ಪರ್ಧೆಗೆ ಒಂದು ವಿದ್ಯಾಲಯದಿಂದ ಇಬ್ಬರು ವಿದ್ಯಾರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.
3) ಒಬ್ಬ ವಿದ್ಯಾರ್ಥಿಗೆ ಭಾಷಣ, ಶಲಾಕಾ, ಕಂಠಪಾಠ, ಶಾಸ್ತ್ರಾರ್ಥವಿಚಾರಗಳಲ್ಲಿ ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗಿದೆ.
4) ಸ್ಪರ್ಧೆ ಆರಂಭವಾಗುವ ಒಂದೂವರೆ ಘಂಟೆ ಮೊದಲು ಪೂರ್ವ ಸೂಚಿತ ಭಾಗದಿಂದ ಒಂದು ವಿಷಯ ನೀಡಲಾಗುತ್ತದೆ.
5) ಭಾಷಣಕ್ಕೆ 5 ನಿಮಿಷಗಳು, ಉಪಸಂಹಾರಕ್ಕೆ ಒಂದು ನಿಮಿಷ ಹೀಗೆ ಒಟ್ಟು 5+1 = 6 ನಿಮಿಷಗಳ ಅವಕಾಶ ನೀಡಲಾಗುತ್ತದೆ.
6) ಭಾಷಣ ಸ್ಪರ್ಧೆಯಲ್ಲಿ ಉಚ್ಚಾರಣೆ, ಶೈಲಿ, ಭಾಷಾಶುದ್ಧಿ, ವಿಷಯ, ಪ್ರಶ್ನೋತ್ತರ – ಇವಿಷ್ಟು ಅಂಶಗಳನ್ನು ಪರಿಗಣಿಸಿ ಸ್ಥಾನಗಳನ್ನು ನಿರ್ಣಯಿಸಲಾಗುತ್ತದೆ.

**ಶಲಾಕಾ ಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು :**

1) ಸಂಸ್ಕೃತ ವಿದ್ಯಾಲಯಗಳಲ್ಲಿ ಶಾಸ್ತ್ರಿ ಅಥವಾ ಆಚಾರ್ಯ ಸ್ತರದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಬಹುದು.
2) ಗುರುಕುಲದಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ 01–01–2022ಕ್ಕೆ ಸರಿಯಾಗಿ 28 ವರ್ಷ ಕಳೆದಿರಬಾರದು.
3) ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಒಂದು ವಿದ್ಯಾಲಯದಿಂದ ಇಬ್ಬರಿಗೆ ಅವಕಾಶವಿದೆ.
4) ಇಲ್ಲಿ ಭಾಗವಹಿಸುವ ವಿದ್ಯಾರ್ಥಿಯು ಭಾಷಣ, ಕಂಠಪಾಠ, ಶಾಸ್ತ್ರಾರ್ಥವಿಚಾರಗಳಲ್ಲಿ ಭಾಗವಹಿಸುವಂತಿಲ್ಲ.
5) ಕಂಠಪಾಠ, ಉಚ್ಚಾರಣೆ, ವ್ಯಾಖ್ಯಾನ, ಪ್ರಶ್ನೋತ್ತರ ಇವಿಷ್ಟು ಅಂಶಗಳನ್ನು ಪರಿಗಣಿಸಿ ಸ್ಥಾನಗಳನ್ನು ನಿರ್ಣಯಿಸಲಾಗುತ್ತದೆ.

**ಕಂಠಪಾಠ ಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು :**

1) ಪ್ರಥಮಾ, ಕಾವ್ಯ, ಸಾಹಿತ್ಯ ಅಥವಾ ಪ್ರಾಕ್ ಶಾಸ್ತ್ರಿ ತರಗತಿಯಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಭಾಗವಹಿಸಬಹುದು.
2) ಒಬ್ಬರಿಗೆ ಒಂದು ಸ್ಪರ್ಧೆಯಲ್ಲಿ ಮಾತ್ರ ಭಾಗವಹಿಸಲು ಅವಕಾಶವಿರುವುದು.
3) ವಿದ್ಯಾರ್ಥಿಯ ವಯಸ್ಸು 18 ಮೀರಿರಬಾರದು.
4) ಪ್ರತ್ಯೇಕ ವಿದ್ಯಾಲಯದಿಂದ ಇಬ್ಬರು ವಿದ್ಯಾರ್ಥಿಗಳು ಭಾಗವಹಿಸಬಹುದು.
5) ಅಮರಕೋಶ, ಅಷ್ಟಾಧ್ಯಾಯೀ, ಭಗವದ್ಗೀತೆ, ಧಾತುರೂಪ ಕಂಠಪಾಠ ಸ್ಪರ್ಧೆಗಳಲ್ಲಿ ಒಂದು ಬಾರಿ ರಾಷ್ಟ್ರಸ್ತರದಲ್ಲಿ ಸ್ವರ್ಣಪದಕ ಪಡೆದವರಿಗೆ ಪುನಃ ಎರಡನೆಯ ಬಾರಿ ಭಾಗವಹಿಸಲು ಅವಕಾಶವಿರುವುದಿಲ್ಲ.
6) ಪೂರ್ವನಿರ್ದಿಷ್ಟ ಗ್ರಂಥವನ್ನು ಸಂಪೂರ್ಣ ಕಂಠಪಾಠ ಮಾಡಬೇಕು.
7) ಕಂಠಪಾಠ, ಉಚ್ಚಾರಣೆ, ಧಾರೆಯನ್ನು ಪರಿಗಣಿಸಿ ಸ್ಥಾನವನ್ನು ನಿರ್ಣಯಿಸಲಾಗುವುದು.

**ಶಾಸ್ತ್ರಾರ್ಥವಿಚಾರಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು :**

1) ಯಾವುದಾದರೊಂದು ಸಂಸ್ಕೃತ ವಿದ್ಯಾಲಯದಲ್ಲಿ ಶಾಸ್ತ್ರಿ, ಆಚಾರ್ಯ, ವಿದ್ಯಾವಾರಿಧಿ ತರಗತಿಯಲ್ಲಿ ನಿಯತವಾಗಿ ಅಧ್ಯಯನ ಮಾಡುತ್ತಿರಬೇಕು.
2) 28 ವರ್ಷ ಮೀರಿರಬಾರದು.
3) ಒಂದು ವಿದ್ಯಾಲಯದಿಂದ ಇಬ್ಬರಿಗೆ ಭಾಗವಹಿಸಲು ಅವಕಾಶವಿದೆ.
4) ಇಲ್ಲಿ ಭಾಗವಹಿಸುವ ವಿದ್ಯಾರ್ಥಿಯು ಭಾಷಣ, ಶಲಾಕಾ, ಕಂಠಪಾಠ ಸ್ಪರ್ಧೆಗಳಲ್ಲಿ ಭಾಗವಹಿಸುವಂತಿಲ್ಲ.
5) ಪೂರ್ವ ನಿರ್ದಿಷ್ಟ ವಿಚಾರದಲ್ಲಿ ಸ್ವಾಭೀಷ್ಟಾಂಶವನ್ನು ಸ್ವೀಕರಿಸಿ ವಾಕ್ಯಾರ್ಥ ಮಾಡಬಹುದು.
6) ಒಬ್ಬ ವಿದ್ಯಾರ್ಥಿಗೆ ಪೂರ್ವಪಕ್ಷ, ಸಿದ್ಧಾಂತ ಪ್ರತಿಪಾದನೆ ಮಾಡಲು 12 ನಿಮಿಷಗಳ ಸಮಯಾವಕಾಶ ನೀಡಲಾಗುವುದು. ಅದಾದ ನಂತರ ನಿರ್ಣಾಯಕರು ಕೇಳುವ ಪ್ರಶ್ನೆಗಳಿಗೆ ಉತ್ತರಿಸಬೇಕು. ಉಳಿದ ವಿದ್ಯಾರ್ಥಿಗಳಿಗೂ ಪ್ರಶ್ನೆ ಕೇಳಲು ಅವಕಾಶವಿರುತ್ತದೆ.
7) ವಿದ್ಯಾರ್ಥಿಯ ಪ್ರಸ್ತುತಿ, ಶೈಲಿ, ಉಚ್ಚಾರಣೆ, ಭಾಷಾಶುದ್ಧಿ, ವಿಷಯಪ್ರತಿಪಾದನೆ, ಪ್ರಶ್ನೋತ್ತರ ಸಾಮರ್ಥ್ಯಗಳನ್ನು ಪರಿಗಣಿಸಿ ಸ್ಥಾನವನ್ನು ನಿರ್ಣಯಿಸಲಾಗುವುದು.

**ಸಮಸ್ಯಾಪೂರ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು :**

1) ಭಾಷಣ, ಶಲಾಕಾ, ಕಂಠಪಾಠ, ಶಾಸ್ತ್ರಾರ್ಥವಿಚಾರ ಸ್ಪರ್ಧೆಗಳಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೂ ಇಲ್ಲಿ ಭಾಗವಹಿಸಲು ಅವಕಾಶವಿದೆ. ಇಲ್ಲಿ ಭಾಗವಹಿಸದಿರುವ ಪ್ರತಿ ವಿದ್ಯಾಲಯದಿಂದ ಈ ಸ್ಪರ್ಧೆಗಾಗಿಯೇ ಆಯ್ಕೆಯಾದ ಇನ್ನಿಬ್ಬರು ವಿದ್ಯಾರ್ಥಿಗಳಿಗೂ ಭಾಗವಹಿಸಲು ಅವಕಾಶವಿದೆ.
2) ವಿಷಯ, ಭಾಷೆ ಹಾಗೂ ಛಂದಸ್ಸನ್ನು ಪರಿಗಣಿಸಿ ಸ್ಥಾನವನ್ನು ನಿರ್ಣಯಿಸಲಾಗುವುದು.

**ಶಾಸ್ತ್ರೀಯ ಸ್ಫೂರ್ತಿ ಸ್ಪರ್ಧೆಯಲ್ಲಿ ಭಾಗವಹಿಸಲು ನಿಯಮಗಳು :**

1) ಶಾಸ್ತ್ರಿ, ಆಚಾರ್ಯ, ವಿದ್ಯಾವಾರಿಧಿ ತರಗತಿಗಳಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳು ಭಾಗವಹಿಸಬಹುದಾಗಿದೆ.
2) 28 ವರ್ಷ ಮೀರಿರಬಾರದು.
3) ಒಂದು ವಿದ್ಯಾಲಯದಿಂದ ಇಬ್ಬರು ವಿದ್ಯಾರ್ಥಿಗಳ ಒಂದು ತಂಡಕ್ಕೆ ಮಾತ್ರ ಅವಕಾಶವಿರುತ್ತದೆ. ಈ ಇಬ್ಬರು ವಿದ್ಯಾರ್ಥಿಗಳು ಬೇರೆ ಸ್ಪರ್ಧೆಗಳಲ್ಲಿ ಭಾಗವಹಿಸಿದವರಾಗಬಹುದು ಅಥವಾ ಇದಕ್ಕಾಗಿಯೇ ಪ್ರತ್ಯೇಕವಾಗಿ ಆಯ್ಕೆಯಾದ ವಿದ್ಯಾರ್ಥಿಗಳಾದರೂ ಆಗಬಹುದು.
4) ಸಂಸ್ಕೃತ ಸಾಹಿತ್ಯ, ವೇದಗಳು, ಪುರಾಣಗಳು, ಶಾಸ್ತ್ರಗಳು, ಕಾವ್ಯಾದಿಗಳು ಇಲ್ಲಿಯ ವಿಷಯಗಳಾಗಿರುತ್ತವೆ.

**ಅಕ್ಷರಶ್ಲೋಕೀ ಅಥವಾ ಅಂತ್ಯಾಕ್ಷರೀ ಸ್ಪರ್ಧೆಯ ನಿಯಮವನ್ನು ರಾಷ್ಟ್ರಿಯ ಸಂಸ್ಕೃತ ಸಂಸ್ಥಾನದ Websiteನ್ನು ನೋಡಿ ತಿಳಿದುಕೊಳ್ಳುವುದು.**

ಕುಲಸಚಿವರು

Registrar
Karnataka Samskrit University
Pampa Mahakavi Road, Chamarajpet,
Bengaluru - 560018. Ph: 080-26705387